## ದಿನಾಂಕ:07-11-2022 ರಂದು ಬೆಳ್ಳಿಗ್ಗೆ 11:00 ಗಂಟೆಗೆ ವಾರ್ಡ್-120(ಹಳೇ ವಾರ್ಡ್ 80) ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-120(ಹಳೇ ವಾರ್ಡ್ 80) ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ: 07-11-2022 ರಂದು ಬೆಳ್ಳಿಗ್ಗೆ 11:00 ಗಂಟೆಗೆ ವಾರ್ಡ್‌ನ ನೋಡಲ್ ಅಧಿಕಾರಿಯವರಾದ ಶ್ರೀ.ಈರಣ್ಣ ರವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಮತ್ತು ಅಧಿಕಾರಿ / ನೌಕರರು ಸಭೆಯಲ್ಲಿ ಹಾಜರಾಗಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಈರಣ್ಣ- ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-120
2. ಶ್ರೀ.ಶ್ರೀನಿವಾಸ್.ವಿ (ಪ್ರಭಾರ) -ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ
3. ಶ್ರೀಮತಿ.ರೇಣುಕ- ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ.ಮಹದೇವ- ಜಲ ಪರಿವೀಕ್ಷಕರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)
5. ಶ್ರೀ.ನವೀನ್ – ಕಿರಿಯ ಆರೋಗ್ಯ ನಿರೀಕ್ಷಕರು,
6. ಶ್ರೀ.ಮಧು.ಎಸ್.ಎಂ-ವಾರ್ಡ್ ಮಾರ್ಷಲ್
7. ಶ್ರೀ.ತಿಮ್ಮಪ್ಪ ಅರಣ್ಯ ಇಲಾಖೆ

**ಸದಸ್ಯರು ಮತ್ತು ಸ್ಥಳೀಯ ನಿವಾಸಿಗಳು**

1. ಶ್ರೀ.ರವಿಶಂಕರ್- ಸದಸ್ಯರು
2. ಶ್ರೀಮತಿ.ತನುಜಾ
3. ಶ್ರೀ.ಎಸ್.ಜಗದೀಶ್

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ವಿ.ಶ್ರೀನಿವಾಸ್ ಸಹಾಯಕ ಅಭಿಯಂತರರು ಸದರಿ ಸಭೆಗೆ ಹಾಜರಾಗಿರುವ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಸ್ತಾಪಿಸಿ ಬಾಕಿ ಇರುವ ದೂರುಗಳಿಗೆ ಸಂಬಂದಿಸಿದಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿ ಸಭೆಯನ್ನು ಪ್ರಾರಂಭಿಸಿದರು.

- ಇಂದಿರಾನಗರ 100 ಅಡಿರಸ್ತೆಯ ಪಾದಚಾರಿ ರಸ್ತೆಯಲ್ಲಿ ಓ.ಎಫ್.ಸಿ ಕೇಬಲ್‌ಗಳನ್ನು ಜಂಕ್ಷನ್ ರಸ್ತೆ ಮಟ್ಟಕ್ಕಿಂತ ಮೇಲೆ ಅಳವಡಿಸುತ್ತಿರುವುದನ್ನು ತಡೆಗಟ್ಟಲು ಸಭೆಯಲ್ಲಿ ದೂರಿದರು. ಅದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ ಸದರಿ ರಸ್ತೆಯು ರಸ್ತೆ ಮೂಲಭೂತ ಸೌಕರ್ಯ ರವರಿಗೆ ಒಳಪಡುವುದರಿಂದ ಸದರಿಯವರಿಗೆ ತಿಳಿಸಲಾಗುವುದು ಎಂದು ತಿಳಿಸಿದರು.
  **(ಕ್ರಮ:- ರಸ್ತೆ ಮೂಲಭೂತ ಸೌಕರ್ಯ ಸಹಾಯಕ ಅಭಿಯಂತರರು)**
- ಸ್ವತ್ತಿನ ಸಂಖ್ಯೆ:251, 5ನೇ ಮುಖರಸ್ತೆ, 6ನೇ ಅಡ್ಡರಸ್ತೆ ಹಾಗೂ 12ನೇ ಅಡ್ಡರಸ್ತೆ, 5ನೇ ಅಡ್ಡರಸ್ತೆ ಇಂದಿರಾನಗರ 1ನೇ ಹಂತ ಇಲ್ಲಿ ಮರದ ಕೊಂಬೆಗಳನ್ನು ಟ್ರಿಮ್ಮಿಂಗ್ ಮಾಡಲು ಹಾಗೂ ಒಣಗಿರುವ ಮರ ರೆಂಬೆ-ಕೊಂಬೆಗಳನ್ನು ಕತ್ತರಿಸಲು ಕೋರಿದರು.
  **(ಕ್ರಮ:- ಶಾಖಾಧಿಕಾರಿಗಳು ಅರಣ್ಯ ಇಲಾಖೆ)**
- ಇಂದಿರಾನಗರದ 7ನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದಲ್ಲಿ ಹೋಟೆಲ್‌ವೊಂದರ ಸಾಮಾಗ್ರಿಗಳನ್ನು ಇಡುವುದನ್ನು ಆಕ್ಷೇಪಿಸಿ, ಸಂಬಂಧಪಟ್ಟ ಹೋಟೆಲ್ ಮಾಲೀಕರ ಮೇಲೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಕೋರಿದರು.
  **(ಕ್ರಮ:- ಹಿರಿಯ ಆರೋಗ್ಯ ಪರಿವೀಕ್ಷಕರು)**

* ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಎಲ್ಲಾ ಇಲಾಖೆಯ ಅಧಿಕಾರಿ/ನೌಕರರು ತಪ್ಪದೇ ಹಾಜರಾಗಲು ನೋಡೆಲ್ ಅಧಿಕಾರಿಗಳು ಹಾಗೂ ಸಾರ್ವಜನಿಕರು ತಿಳಿಸಿದರು.

ಮೇಲ್ಕಂಡಂತೆ ಚರ್ಚಿಸಲಾಗಿರುವ ಎಲ್ಲಾ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸಲು ಹಾಗೂ ಕ್ರಮ ವಹಿಸಿರುವ ಬಗ್ಗೆ ಮುಂದಿನ ಸಭೆಗೆ ಹಾಜರುಪಡಿಸಲು ತಿಳಿಸಿ ಮತ್ತು ಮುಂದಿನ ಸಭೆಗೆ ತೋಟಗಾರಿಕಾ ಇಲಾಯವರು, ಪೊಲೀಸ್ ಇಲಾಖೆ(ಕಾ &ಸು) ಮತ್ತು ಸಂಚಾರ ಇಲಾಖೆರವರು ಕಡ್ಡಾಯವಾಗಿ ಸಭೆಗೆ ಹಾಜರಾಗುವಂತೆ ಕ್ರಮ ವಹಿಸಲು ಕಾರ್ಯದರ್ಶಿರವರಿಗೆ ಸೂಚಿಸಿ, ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ಸಮಿತಿ-120

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 120
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 120